# ಕಣ್ಣೀರಿಗೆ ನಮಸ್ಕಾರ

ಕಣ್ಣುಗಳು ಹನಿಗೂಡುವುದು ಸಂತೋಷದ ಅತ್ಯುತ್ತಮ ಅಭಿವ್ಯಕ್ತಿ. ಕಣ್ಣು ತೇವಗೊಳ್ಳದೆ ಹೋಗುವ ಸಂದರ್ಭದ ಸಂತೋಷ, ಆ ಹೊತ್ತಿನ ಮೋಜಾಗಿ ಕೊನೆಗೊಳ್ಳುವುದೇ ಹೆಚ್ಚು. ನೆನಪಿನ ಪುಟಗಳನ್ನು ಒಮ್ಮೆ ನೇವರಿಸಿ ನೋಡಿದರೆ, ಬದುಕಿನ ಬಹುತೇಕ ಸಂತೋಷಗಳು ಕಣ್ಣೀರಿನಲ್ಲಿ ಮಿಂದು ಮೌಲ್ಯವರ್ಧನೆ ಆದವುಗಳೇ ಆಗಿರುತ್ತವೆ.

ಆಗಷ್ಟೇ ಹುಟ್ಟಿದ ಮಗುವನ್ನು ಮುಖದ ಮುಂದೆ ಹಿಡಿದಾಗ ತಾಯಿಯ ಹೃದಯ ಹಿಗ್ಗುತ್ತದೆ. ಆ ಬೆಲೆ ಕಟ್ಟಲಾಗದ ಹಿಗ್ಗಿನ ಹೊಳಪು ಕಣ್ಣ ತೇವದ ಮೂಲಕ ಹೆಚ್ಚುತ್ತದೆ. ಮಗುವಿನ ಜನನವೆನ್ನುವುದು ತಾಯಿಯ ಹುಟ್ಟೂ ಹೌದು. ಮೈಮನಗಳನ್ನು ಹಿಂಡುವ ಜೀವನ್ಮರಣದ ಸಂಕಟವನ್ನು ಹೆಣ್ಣು ಎದುರಿಸಿದ ನಂತರವೇ ಮಗು ಇಳೆಗೆ ಇಳಿಯುವುದು, ಅಳುವುದು. ಮಗುವಿನ ಅಳು ಕೇಳಿದಾಗ ಅಮ್ಮನ ಮುಖದಲ್ಲಿ ನಿರಾಳಭಾವ, ಮಂದಹಾಸ. ತಾಯಿ–ಮಗುವನ್ನು ಕಂಡು ಮನೆಮಂದಿಗೂ ಆನಂದ. ಈ ನಿರಾಳಭಾವ ಹಾಗೂ ಆನಂದದ ಹಿಂದಿನ ನೋವು, ದಣಿವು ಹಾಗೂ ಆತಂಕ ಅಳತೆಗೆ ಸಿಲುಕುವಂತಹುದೇ?

ತಾಯಿ–ಮಗುವಿನ ಜನನದ ಸಂದರ್ಭ ಮಾತ್ರವಲ್ಲ, ಬದುಕಿನ ಎಲ್ಲ ಸಾಧನೆಗಳೂ ಸಂಕಟದ ಹಾದಿಯನ್ನು ದಾಟಿ ಬಂದಿರುತ್ತವೆ. ಅಗ್ನಿಪರೀಕ್ಷೆ ಎದುರಿಸದ ಸಾಧನೆಯ ಆಯಸ್ಸು ಕಡಿಮೆ, ಪರಿಣಾಮವೂ ಕಡಿಮೆ. ಮನೆಯ ಉದಾಹರಣೆಯನ್ನೇ ನೋಡಿ. ಮಧ್ಯಮ ವರ್ಗದ ತರುಣ ತರುಣಿಯರ ಪಾಲಿಗೆ ಸ್ವಂತ ಸೂರನ್ನು ಕೈಗೆಟುಕಿಸಿಕೊಳ್ಳುವುದು ಜೀವನದ ಕನಸುಗಳಲ್ಲೊಂದು. ಮನೆ ಸಾಕಾರಗೊಂಡಾಗ ‘ಗೃಹಪ್ರವೇಶ’ದ ಸಂಭ್ರಮ, ಬಂಧುಮಿತ್ರರ ಸಡಗರ ಸಹಜವಾದುದು. ಆದರೆ, ಆ ಸಂಭ್ರಮದ ಹಿಂದಿನ ತವಕತಲ್ಲಣವನ್ನು ಮನೆಯೊಡೆಯರಷ್ಟೇ ಬಲ್ಲರು. ಸಿಮೆಂಟು–ಮರಳಿನ ಬಂಧನದ ಬಾಂಧವ್ಯಕ್ಕೆ ಇಟ್ಟಿಗೆ ಹಾಗೂ ಕಬ್ಬಿಣ ಒಪ್ಪಿಸಿಕೊಂಡಾಗ ಮನೆಯೆನ್ನುವ ಸಮೀಕರಣ ಸಾಧ್ಯವಾಗುತ್ತದೆನ್ನುವುದು ಸಾಮಾನ್ಯಜ್ಞಾನ. ಆದರೆ, ಸಿಮೆಂಟು–ಮರಳಿನ ಜೊತೆಗೆ ಬೆವರಿನ ಅಂಟೂ ಸೇರಿಕೊಂಡು ಗೋಡೆಗಳು ಎದ್ದುನಿಂತಿರುತ್ತವೆ ಎನ್ನುವುದು ಮನೆ ಕಟ್ಟಿಸಿದವರ ಅನುಭವ. ವರ್ಷಗಳ ಕಾಲದ ಕನವರಿಕೆಗಳು ಬಣ್ಣಗಳಾಗಿ ಗೋಡೆಗಳನ್ನು ಅಲಂಕರಿಸಿರುತ್ತವೆ. ಬದುಕಿನ ಸಣ್ಣಪುಟ್ಟ ಸಂತೋಷಗಳನ್ನು ನಿರ್ಲಕ್ಷಿಸಿ ಉಳಿಸಿದ ಜೀವಮಾನದ ಇಡುಗಂಟಿನಲ್ಲಿ ಕೆಲವು ಮನೆಗಳು ರೂಪುಗೊಂಡರೆ, ಮತ್ತೆ ಕೆಲವು ಜೀವನಪೂರ್ತಿ ತೀರಿಸಬೇಕಾದ ಸಾಲವನ್ನುಂಡು ಸಾಕಾರಗೊಂಡಿರುತ್ತವೆ. ಈ ಕನಸು, ತಹತಹ, ಉಳಿತಾಯ, ಸಾಲ – ಇವೆಲ್ಲದರ ಮಿಳಿತದ ಕಾರಣದಿಂದಾಗಿಯೇ ಸ್ವಂತ ಮನೆಯೆನ್ನುವುದು ಸಂಕಟದ ಮಥನದೊಳು ಮೂಡಿಬಂದ ಸಂತಸದ ನವನೀತವಾಗಿರುತ್ತದೆ.

ಯಾವುದೇ ಸಂತೋಷದ ಸನ್ನಿವೇಶದ ಹಿನ್ನೆಲೆಯಲ್ಲಿರುವ ಸಂಕಟ ಅಥವಾ ವಿಷಾದವನ್ನು ಅರಿಯುವ ವಿವೇಕ ನಮ್ಮದಾಗಬೇಕು. ಇಲ್ಲದೆಹೋದರೆ, ಸಂತೋಷ ಎನ್ನುವುದು ಮೋಜಾಗಿ, ಸ್ವೈರತೆಯಾಗಿ ಪರಿಣಮಿಸುತ್ತದೆ; ಕೆಲವೊಮ್ಮೆ ಕೇಡಾಗಿಯೂ ಪರಿಣಮಿಸಬಹುದು. ಸ್ವತಂತ್ರ ಭಾರತದ ಪುಣ್ಯದಿನದ ಉದಾಹರಣೆಯನ್ನು ನೋಡಿ. ಲಕ್ಷಾಂತರ ಜನರ ತ್ಯಾಗ, ಬಲಿದಾನಗಳ ಬೆಲೆ ತೆತ್ತುದರ ಫಲಿತ ಸ್ವಾತಂತ್ರ್ಯವೆನ್ನುವ ಅಮೃತಫಲ; ಸ್ವತಂತ್ರ ಹಾಗೂ ಗಣತಂತ್ರ ಭಾರತ. ಆ ಅಮೃತಫಲವನ್ನು ಸವಿಯುವವರಿಗೆ ಸ್ವಾತಂತ್ರ್ಯದ ಹಿಂದಿನ ತ್ಯಾಗ–ಬಲಿದಾನಗಳ ಋಣಪ್ರಜ್ಞೆ ಅಗತ್ಯ. ಋಣದ ಹಂಗು ಇಲ್ಲದೆ ಹೋದರೆ ಸ್ವಾತಂತ್ರ್ಯವೆನ್ನುವುದು ಮೋಜಿನ ರೂಪು ಪಡೆದುಕೊಳ್ಳುತ್ತದೆ. ಇಂಥ ವೈಪರೀತ್ಯದ ಕುರಿತೇ, ‘ಸ್ವಾತಂತ್ರ್ಯಕು ಸ್ವೈರತೆಗು ಇಹುದು ಅಜಗಜಾಂತರ’ ಎಂದು ಬೇಂದ್ರೆಯವರು ಬಣ್ಣಿಸಿದ್ದು.

ಹಾಸ್ಯ–ವಿನೋದ ಯಾರಿಗೆ ಬೇಡ? ಎಲ್ಲರೂ ನಗೆಯ ಮಡುವಿನಲ್ಲಿ ಈಸಲು ಬಯಸುವವರೇ. ಹಾಗೆಂದು ನಗು ಹಂಚುವುದು ಎಲ್ಲರಿಗೂ ಸಾಧ್ಯವಿಲ್ಲ. ನಗೆ ಹಂಚಲು ಬಲ್ಲ ಕಲಾಕಾರರ ವೈಯಕ್ತಿಕ ಬದುಕಿನಲ್ಲಿ ನಗೆಯೇ ತುಂಬಿರುತ್ತದೆ ಎಂದು ಹೇಳುವಂತೆಯೂ ಇಲ್ಲ. ಜಗತ್ತು ನೆನಪಿಟ್ಟುಕೊಂಡಿರುವ ಬಹುದೊಡ್ಡ ನಗೆಮಲ್ಲರ ಜೀವನದಲ್ಲಿ ದುರಂತಗಳೇ ತುಂಬಿಕೊಂಡಿವೆ. ದುಃಖವನ್ನು ಹಂಚುವುದರಲ್ಲಿನ ನಿರರ್ಥಕತೆಯನ್ನು ಅರಿತು, ನಗೆಯನ್ನು ಸಾಂಕ್ರಾಮಿಕವಾಗಿಸುವ ಸಾರ್ಥಕತೆಯನ್ನು ಅರಿತವರಷ್ಟೇ ಯಶಸ್ವೀ ನಗೆಕೋವಿದರಾಗಲು ಸಾಧ್ಯ. ನಗೆನಕಾಶೆಯ ಮಿನುಗುತಾರೆ ಚಾರ್ಲಿ ಚಾಪ್ಲಿನ್, ಕನ್ನಡದವರೇ ಆದ ನರಸಿಂಹರಾಜು ಹಾಗೂ ಬಾಲಕೃಷ್ಣ, ಯಾರ ಬದುಕಿನಲ್ಲಿ ದುಃಖವಿಲ್ಲ? ಎದೆಯಲ್ಲಿ ನಂಜಿನ ಪರ್ವತವನ್ನು ಹುದುಗಿಸಿಕೊಂಡಿದ್ದ ಅವರು ಹಂಚಿದ್ದು ನಗೆಯನ್ನಷ್ಟೇ. ನಗೆಯ ಲೇಪದೊಂದಿಗೇ ಬದುಕಿನ ಕಟುಸತ್ಯಗಳನ್ನು ಸಮಾಜಕ್ಕೆ ದಾಟಿಸಿದ ಸಾಧನೆ ಅವರದು.

ಸಂತಸವನ್ನು ಸೂರೆಗೊಳ್ಳುವುದೇ ಬದುಕಿನ ಗುರಿಯಂತೆ ಇಂದಿನ ಜಗತ್ತು ವರ್ತಿಸುತ್ತದೆ. ಸಂತಸದ ಹಿಂದಿನ ಸಂತಾಪದ ಅರಿವು ಹಾಗೂ ಸಂಭ್ರಮದ ಜೊತೆಗೆ ನಿರ್ವಹಿಸಬೇಕಾದ ಜವಾಬ್ದಾರಿ ಯಾರಿಗೆ ಬೇಕು? ಸಂತಸಕ್ಕೊಂದು ಘನ ಕಾರಣದ ನೆಪವೂ ವರ್ತಮಾನಕ್ಕೆ ಬೇಕಿದ್ದಂತಿಲ್ಲ. ಸಂತಸವನ್ನು ಉತ್ಪಾದಿಸುವ, ಸಂತಸವನ್ನು ಮಾರುಕಟ್ಟೆ ಮಾಡುವ ಕಾಲಘಟ್ಟವಿದು. ತ್ಯಾಗವನ್ನು ಭೋಗ ಪಲ್ಲಟಗೊಳಿಸಿದೆ. ಒಬ್ಬರ ಸಂಕಟ ಮತ್ತೊಬ್ಬರಿಗೆ ಸಂತೋಷ ತರಬಹುದಾದ ಸಂದರ್ಭ ಇಂದಿನದು. ನಾಣ್ಯ–ನೋಟುಗಳನ್ನು ಅಮಾನ್ಯಗೊಳಿಸುವುದಕ್ಕಿಂತಲೂ ಸುಲಭವಾಗಿ, ತ್ಯಾಗ, ಮೌಲ್ಯ, ಋಣಗಳಂಥ ಪದಗಳನ್ನು ಸಮಾಜ ಚಲಾವಣೆಯಿಂದ ಹಿಂದೆ ಪಡೆದಂತಿದೆ. ಸಂತೋಷ ಪ್ರಕಟಗೊಳ್ಳುವ ಕಣ್ಣುಗಳಲ್ಲಿ ಕಣ್ಣೀರಿನ ತೇಜ ಮಿನುಗುವ ಬದಲು, ಯಾವುದೋ ಕಹಿಯ ಸೆಳಕು, ಉನ್ಮಾದದ ನೆರಳು. ಈ ಮಣ್ಣಿನ ಮಹಾಕಾವ್ಯಗಳು ‘ಶೋಕದಿಂದ ಶ್ಲೋಕ’ ಎನ್ನುವುದರ ಸಾಕ್ಷಿರೂಪ ಎನ್ನುವುದರ ಮರೆವೆ ವರ್ತಮಾನವನ್ನು ಬಾಧಿಸುತ್ತಿರುವಂತಿದೆ. ಅದರ ಫಲವೇ, ಶ್ಲೋಕದಿಂದ ಶೋಕವನ್ನು ಬೇರ್ಪಡಿಸಿ, ಜಿದ್ದಿನ ಕಥನಗಳ ವಿಜೃಂಭಣೆ ಈ ಹೊತ್ತಿಗೆ ಪ್ರಿಯವಾಗಿರುವಂತಿದೆ. ಕಾವ್ಯಗಳ ಒಡಲಿಂದ ಬದುಕಿನ ಕ್ಲೇಶಗಳಿಗೆ ಉತ್ತರಗಳನ್ನು ಹೆಕ್ಕಿಕೊಳ್ಳುವ ಬದಲು, ಕ್ಲೇಶಗಳಿಗೆ ಕಾರಣಗಳನ್ನು ಹುಡುಕಲಾಗುತ್ತಿದೆ. ಅಂತರ್ಜಲ ಬತ್ತುತ್ತಿರುವುದು ಅವನಿಯಲ್ಲಷ್ಟೇ ಅಲ್ಲ, ಎದೆಯ ಧಮನಿಗಳಲ್ಲೂ.

■ **ಚಂಪಕಮಾಲಾ**

## ಮಾತೇ ಮುತ್ತು

- ಹೊಗಳಿಕೆಯ ಮಾಲಿನ್ಯವನ್ನು ತೊಡೆದು ಹಾಕಲು ಏಕಮಾತ್ರ ಉಪಾಯ: ಕೆಲಸ ಮತ್ತು ಇನ್ನಷ್ಟು ಕೆಲಸ.

  —ಆಲ್ಬರ್ಟ್ ಐನ್‌ಸ್ಟೀನ್

- ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ ಅದೇ ಶ್ರೇಷ್ಠ ಸರ್ಕಾರ.

  —ಮೆಕಾಲೆ

- ಯಾವುದಿಹವೋ ಬಂಧನವೋ, ಭ್ರಾಂತಿಯೋ ಅದಾಗಲಿ ನನ್ನ ನೆಲೆ/ ಯಾವುದನುಭವದ ಸಹಜ ಕ್ರಾಂತಿಯೋ ಅದಾಗಲಿ ನನ್ನ ಕಲೆ.

  —ಕೆ.ಎಸ್. ನರಸಿಂಹ ಸ್ವಾಮಿ

- ನೀವು ಲೋಕವನ್ನಾಗಲಿ, ಸಮಾಜವನ್ನಾಗಲಿ, ಪುರೋಹಿತಶಾಹಿಯನ್ನೇ ಆಗಲಿ ಬದಲಾಯಿಸಲು ಪ್ರಯತ್ನಿಸುವ ಅಗತ್ಯ ಖಂಡಿತ ಇಲ್ಲ. ನೀವು ಮತ್ತು ನಿಮ್ಮ ಮನಸ್ಸು ಪರಿವರ್ತನೆ ಆಗದೆ ಏನೂ ಬದಲಾಗುವುದಿಲ್ಲ.

  —ಕುವೆಂಪು

- ಕೋಪವನ್ನು ನಿಯಂತ್ರಿಸದಿದ್ದರೆ ಅದು ನಮ್ಮ ಮನಸ್ಸಿನ ಜ್ಯೋತಿಯನ್ನು ನಂದಿಸಿಬಿಡುತ್ತದೆ.

  —ಇಂಗರ್ ಸಾಲ್

- ಯಾರು ಪ್ರೀತಿಸುತ್ತಾರೋ ಅವರಿಗೆ ಮಾತ್ರ ತಿದ್ದುವ , ಶಿಕ್ಷಿಸುವ ಅಧಿಕಾರ ಉಂಟು.

  —ರವೀಂದ್ರನಾಥ್ ಟ್ಯಾಗೋರ್